*ನೇ.ಗೋ.ಭ, ಕುಕ್ಕೆ ಸುಬ್ರಹ್ಮಣ್ಯ*
*ದೇವರು ಇನ್ನೂ ಮನುಷ್ಯರನ್ನು ಹುಟ್ಟಿಸುತ್ತಲೇ ಇದ್ದಾನಲ್ಲಾ, ಆತನಿಗೆ ಬರ್ತ್ ಕಂಟ್ರೋಲ್ ಕಲಿಸೋರು ಯಾರು?*



ಛೆ! ಅವನ ತಪ್ಪಿಲ್ಲ ಬಿಡಿ. ಬರ್ತ್ ಕಂಟ್ರೋಲ್ ಇಲಾಖೆ ಈಗ ಆ ದೇವನದಲ್ಲ, ಪತಿದೇವನದು.

*ಎಂ.ಜಿ.ನೇಹವರ್ಷಿಣಿ, ಬಳ್ಳಾರಿ*
*ಬಿಟ್ಟು ತಿನ್ನುವುದಕ್ಕಿಂತಲೂ ಕೊಟ್ಟು ತಿನ್ನುವುದರಲ್ಲೇ ಸುಖ ಎಂಬುದನ್ನು ರಾಜಕೀಯಕ್ಕೆ ಹೋಲಿಸಿದರೆ?*
ಕೊಟ್ಟು ತಿನ್ನುವುದಕ್ಕಿಂತಲೂ ಒಟ್ಟು ಕಬಳಿಸುವುದೇ ಸುಖ!

*ಎಸ್.ಶ್ರೀಧರ್, ಬೆಂಗಳೂರು*
*ಸಂತೋಷ ಎಂದರೇನು?*
ಸಂ–ಸಂತೃಪ್ತಿಯನ್ನು ತೋ–ತೋರಬಲ್ಲ ಷ–ಷಕಲ್ ಎಂದು.

*ವೀರೇಂದ್ರ ಎಂ ವೇಗುರ್, ಧಾರವಾಡ*
*ರಾಜಕೀಯಕ್ಕೂ, ಡೊಂಬರಾಟಕ್ಕೂ ಇರುವ ವ್ಯತ್ಯಾಸ?*
ಡೊಂಬರಾಟಕ್ಕೆ ಬೇಕಾದ್ದು ಯುಕ್ತಿ, ರಾಜಕೀಯಕ್ಕೆ ಕುಯುಕ್ತಿ.

*ಗಾಯತ್ರಿ, ರಾಜಾಜಿನಗರ*
*ಮನೆಯಲ್ಲಿ ಮೃಷ್ಟಾನ್ನವಿದ್ದರೂ ಹೊರಗಿನ ಹಳಸಿದನ್ನವನ್ನು ಇಷ್ಟಪಡುತ್ತಾರಲ್ಲಾ...?*



ಮೃಷ್ಟಾನ್ನ ಹೆಚ್ಚೆಂದರೆ ನಿದ್ರೆ ಬರಿಸೀತು, ಹಳಸಲು ಅಮಲೇರಿಸುತ್ತದೆ!

*ರಾಮಚಂದ್ರ ಕೊಪ್ಪಲು, ಅರಳಾಪುರ*
*ಭಯೋತ್ಪಾದನೆ, ಭ್ರಷ್ಟಾಚಾರಗಳು ನಮ್ಮ ದೇಶದ ಬೆನ್ನೆಲುಬಂತೆ, ಹೌದಾ?*
ಊಹೂಂ. ನಾಗರಿಕರ ಬಾಯ್ವಾಸನೆಯಂತೆ; ಕೆಟ್ಟದೆಂದು ತಿಳಿದಿದ್ದರೂ ದೂರ ಮಾಡದಂತಹವು.

*ನ.ಮುನಿಯಪ್ಪ, ಮಳ್ಳೂರು*
*ಕೆಲಸಕ್ಕೆ ಬಾರದ ಪ್ರಶ್ನೆಗಳನ್ನು ಬಿಸಾಕಿ ಮಾನವಕುಲಕ್ಕೆ ಒಳ್ಳೆಯದಾಗುವ ಪ್ರಶ್ನೆಗಳಿಗೆ ಉತ್ತರಿಸುವುದು ಒಳ್ಳೆಯದಲ್ಲವೇ?*
ಅರಸರ ದೊಡ್ಡ ಪ್ರಶ್ನೆಗೂ, ದಡ್ಡ ಪ್ರಶ್ನೆಗೂ ಉತ್ತರಿಸುವುದು ವಿದೂಷಕನ ಹೊಣೆ.

*ಪಿ.ಎಸ್.ಶ್ರೀವತ್ಸ, ಬೆಂಗಳೂರು*
*ವಾಯುವಜ್ರ ಬಸ್ಸುಗಳಲ್ಲಿ ಪಿಕ್‌ಪಾಕೆಟ್ಟೇ ಆಗದಿರಲು ಕಾರಣ..?*
ಪಾಕೆಟ್ಟಲ್ಲಿರುವ ದುಡ್ಡೆಲ್ಲಾ ಟಿಕೆಟ್‌ಗೇ ಖಾಲಿಯಾಗಿರುತ್ತದಲ್ಲ!

*ಎಂ.ಎಸ್.ಸೋಮಶೇಖರ್, ಮೈಸೂರು*
*ಮನಸ್ಸು ಮತ್ತು ಮೆದುಳು ಇವೆರಡಕ್ಕೂ ಇರುವ ವ್ಯತ್ಯಾಸವೇನು?*
ಮನಸ್ಸು ಮಾಡಬಹುದು, ನೀಡಬಹುದು; ಮೆದುಳನ್ನು ಮಾಡಲೂ ಆಗದು, ನೀಡಲೂ ಆಗದು.

*ನರಸಿಂಹ ಎಂ. ಪೈ, ಕಾಸರಗೋಡ*
*2009 ಎಂತಹ ವರ್ಷ?*
ಎರಡು ಸಾವಿರದ ಎಂದಿದ್ದರೂ ಎರಡು ದಿಗ್ಗಜರ ಸಾವಿನಿಂದಲೇ ಕೊನೆಯಾದಂತದ್ದು!

*ನಾಗರಾಜ ಮಲ್ಲಿ ಒಡೆಯರ್, ಹೂವಿನಹಡಗಲಿ*
*ಬಂಗಾರದ ಬೆಲೆ ಗಗನಕ್ಕೇರಿದರೂ ಕೊಳ್ಳುವವರ ಸಂಖ್ಯೆ ಕಡಿಮೆಯಾಗಲಿಲ್ಲವಲ್ಲ ಸ್ವಾಮಿ?*
ಗೆಳತಿಯ ಮೋಹ ಇರುವವರೆಗೆ ಹಳದಿಯ ದಾಹ ಇದ್ದೇ ಇರುತ್ತದೆ ಸ್ವಾಮಿ.

*ಬಿ.ಪಿ. ನಾಗಲಿಂಗಮೂರ್ತಿ, ಬೆಂಗಳೂರು*
*ನಮ್ಮ ದೇಶದ ಶ್ರೀಸಾಮಾನ್ಯ ಕ್ಯಾತ ಹಾಗೂ ಅನೇಕಾನೇಕ ಖ್ಯಾತರಲ್ಲಿ ಯಾರು ಮುಖ್ಯ?*
ಕ್ಯಾತನೇ. ಅವನಂತಹ ಶ್ರೀಸಾಮಾನ್ಯರು ಸ್ವೀಕರಿಸದಿದ್ದರೆ ಯಾರೂ ಖ್ಯಾತರಾಗಲು ಆಗದು.

*ಏರ್‌ಫೋರ್ಸ್ ಕುಮಾರ್, ಹೆಡತಲೆ,*
*ಲೋಕಲ್ ಪೂಜಾರಿಯಿಂದ ಶಿಫಾರಸ್ಸು ಮಾಡಿಸುತ್ತೇನೆ, ನನ್ನ ಪ್ರಶ್ನೆಗೆ ಬಹುಮಾನ ಕೊಡುವಿರಾ ಕಮ್ಯಾಂಡರ್?*
ಪೂಜಾರಿಯಿಂದಲೇ? ಬಹುಮಾನವಿರಲಿ, ಇರುವ ಮಾನವೂ ಹೋದೀತು ಡಿಮ್ಯಾಂಡರ್!

*ಎಂ.ಬಿ.ಕೃಷ್ಣಮೂರ್ತಿ, ಚಾಮರಾಜನಗರ*
*ಆರಕ್ಕೆ ಏರಲಿಲ್ಲ, ಮೂರಕ್ಕೆ ಇಳಿಯಲಿಲ್ಲ ಹೀಗೆಂದರೆ ಅರ್ಥ?*
ಕಾಮ, ಕ್ರೋಧ, ಲೋಭ, ಮದ, ಮತ್ಸರ, ಮೋಹಗಳಿಗೆ ಹಾತೊರೆಯಲಿಲ್ಲ, ನಾಚಿಕೆ, ಮಾನ, ಮರ್ಯಾದೆಗಳಿಂದ ವಂಚಿತರಾಗಲಿಲ್ಲವೆಂದು.

## ಬಹುಮಾನಿತ ಪ್ರಶ್ನೆ

*ಎ.ಎಸ್.ರೇಷ್ಮಾ, ಊರಿಲ್ಲ*
*ಭವಬಂಧನದಿಂದ ದೂರವಿರಬೇಕಾದ ಸಂನ್ಯಾಸಿಗಳಿಗೆ ಹುಟ್ಟುಹಬ್ಬದ ಸಂಭ್ರಮವೇಕೆ?*
ಅವರು ಸಂನ್ಯಾಸಿಗಳಲ್ಲ ರೇಷ್ಮಾ, ಮಠಾಧೀಶರು. ಅವರೇ ಬೇರೆ, ಇವರೇ ಬೇರೆ.

*ಶಿರಾಲಿ ದೀಪಕ್ ಆರ್.ಶೇಟ್, ಬೆಂಗಳೂರು*
*ಹೊಟ್ಟೆ ತುಂಬಿದ ಮೇಲೆ ಸಾಕು ಸಾಕು, ಖಜಾನೆ ಎಷ್ಟು ತುಂಬಿದರೂ ಬೇಕು ಬೇಕು. ಯಾಕೆ?*
ಒಂದು ತಲೆಗೆ ಒಂದು ಹೊಟ್ಟೆ ತುಂಬಿದರೆ ಸಾಕು. ಖಜಾನೆ ತಲೆತಲಾಂತರಕ್ಕೆ ತುಂಬಬೇಕಲ್ಲಾ...

*ದೀಪಾ ಕೆ ವಿಭೂತಿ, ಹರಿಹರ*
*ಮಡಿವಂತಿಕೆಯ ನಿಜ ಮಾನವೀಯ ಮೌಲ್ಯಗಳೇನು ಅಂಕಲ್?*
ಶುಚಿತ್ವವಷ್ಟೇ. ಅದಕ್ಕಿಂತಲೂ ಹೆಚ್ಚಿನದಾದರೆ ಅದು ಬರಿದೇ ಬೂಟಾಟಿಕೆ ಆಂಟಿ.

*ಬಾ.ರಂ.ಸುರೇಶ್, ಶಿವಮೊಗ್ಗ*
*ನನ್ನ ಹೆಂಡತಿ ಈವರೆಗೆ ನನ್ನ ಮಾತು ಕೇಳ್ತಿಲ್ಲ. 2010ರಲ್ಲಾದರೂ ಕೇಳುವಂತೆ ಮಾಡಲು ಏನು ಮಾಡಬೇಕು?*
ಹೆಂಡತಿಯ ಎದುರಿನಲ್ಲೇ ಸುಂದರಿಯೊಬ್ಬಳೊಡನೆ ಮಾತನಾಡಿ, ನಿಮ್ಮ ಎಲ್ಲಾ ಮಾತುಗಳನ್ನೂ, ಕಿವಿಯಾನಿಸಿ, ಕೇಳಿಯೇ ಕೇಳುತ್ತಾರೆ.

*ರಾಜು ಎಸ್ ಗಾಲಿ, ಅಥಣಿ*
*2012ರಲ್ಲಿ ಪ್ರಳಯವಂತೆ...?*
ಆ ಹೆಸರಿನ ಚಿತ್ರ ಓಡಲು ಮಾಡಿದ ಗಿಮಿಕ್ ಅದು. ಪಾಪಿ ಚಿರಾಯು, ಪಾಪಿಗಳಿರುವವರೆಗೂ ಜಗವೂ ಚಿರಾಯು!

*ರಾಜೀವಕುಮಾರ ಬಿ ಪೂಜಾರ, ಮಾಗಳ*
*ಓದುಗರಿಗೊಂದು ಸೂಚನೆ ಏನು ಕೊಡುತ್ತೀರಿ?*
ಒಂದು ಕಾರ್ಡಿನಲ್ಲಿ, ಉತ್ತರಿಸಲು ಕಷ್ಟವಾಗುವ, ಒಂದೇ ಪ್ರಶ್ನೆ ಕಳುಹಿಸಿ ಎಂದು.

*ಹೆಚ್.ಎಸ್.ವಿಶ್ವನಾಥ್, ಶಿವಮೊಗ್ಗ*
*........... ಇವರ ನಿಧನದಿಂದ ನಾಡಿಗೆ ತುಂಬಲಾರದ ನಷ್ಟವಾಗಿದೆ ಎನ್ನುವರಲ್ಲ, ಯಾವ ರೀತಿಯ ನಷ್ಟ?*



..........ಅವರು ಕೊಳ್ಳೆ ಹೊಡೆದು ಖಾಲಿ ಮಾಡಿದ ಬೊಕ್ಕಸವನ್ನು ಯಾರೂ ತುಂಬಲಾರರಲ್ಲಾ, ಆ ನಷ್ಟ!

■ ರಾಮ್